Sri P. V. AITHAL.—Whether this College is intended to be run by the Fisheries Federation or by the Fisheries Marketing Federation or by Fisheries Corporation or directly by the Government?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ವಿಶ್ವವಿದ್ಯಾನಿಲಯದಿಂದ ಪ್ರಪೋಸಲ್ 15 ದಿನಗಳ ಹಿಂದೆ ಬಂತು. ಅದಕ್ಕೆ ಮೊದಲು ವಿಶ್ವವಿದ್ಯಾನಿಲಯದವರೂ ಯೋಚನೆ ಮಾಡುತ್ತಿದ್ದರು. ತಮಗೆಲ್ಲಿ ಗೊತ್ತಿರುವಂತೆ ಅದು ಸ್ಥಾಪನೆಯಾಗಿ 2-3 ವರ್ಷವಾಯಿತು. ವ್ಯವಸಾಯ ಕಾಲೇಜು ಮತ್ತು ವೆಟರನರಿ ಕಾಲೇಜನ್ನು ಬಿಡದು ಈಗ ಫಿಷರೀಸ್ ಸೈನ್ಸ್‌ಗೆ ಸಂಬಂಧಪಟ್ಟ ಕಾಲೇಜನ್ನು ಪ್ರಾರಂಭ ಮಾಡಬೇಕೆಂದು ಇದ್ದಾರೆ. ಅದಕ್ಕೆ ನಾವು ಸಪೋರ್ಟ್ ಮಾಡುತ್ತಿದ್ದೇವೆ.

Construction of Hostel for Depressed Class

12. Sri M. MALLAPPA (Birur).—

Will the Minister for Social Welfare be pleased to state :—

(*a*) whether it is not a fact that there is a proposal for the construction of Depressed Class Hostel at Birur;

(*b*) whether it is a fact that the Government have reserved two acres of land in S. N. 2/7 Birur Kaval just by the side of Bangalore-Honnavar Road within the Town limits of Birur about five years back;

(*c*) action taken so far for the construction of the Hostel at Birur?

A.—Sri V. L. PATIL (Minister for Social Welfare).—

(*a*) No.

(*b*) No.

(*c*) Does not arise.

Sri M. MALLAPPA.—Has it come to the notice of the Government that they are running a hostel for depressed class students for the past hundred years at Birur?

†ಶ್ರೀ ವಿ. ಎಲ್. ಪಾಟೀಲ್.—ಇರಬಹುದು.

Sri M. MALLAPPA.—Is there no necessity for the construction of hostel building at Birur?

ಶ್ರೀ ವಿ. ಎಲ್. ಪಾಟೀಲ್.—ವಿಚಾರ ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಪ್ಪ.—ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಹರಿಜನರ ಅಭಿವೃದ್ಧಿಯಾಗಬೇಕು, ಅವರಿಗೆ ಅನುಕೂಲವಾಗಬೇಕು ಎಂದು ಹೇಳುತ್ತೀರಿ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಕಡೆಯೂ ಹಾಸ್ಟಲ್ ಮಾಡಿಲ್ಲ. ಇದಕ್ಕೇ ಕಾರಣವೇನು? ಸರ್ಕಾರದಲ್ಲಿ ದುಡ್ಡಿಲ್ಲವೆ? ದುಡ್ಡನ್ನು ಲ್ಯಾಪ್ಸ್ ಮಾಡಿ ಕೇಂದ್ರ ಸರ್ಕಾರಕ್ಕೆ ವಾಪಸು ಕಳಿಸುತ್ತಿದ್ದೀರಿ. ಇದಕ್ಕೆ ಕಾರಣವೇನು? ಹರಿಜನರ ಅಭಿವೃದ್ಧಿ ಮಾಡಬೇಕೆಂದು ಬಾಯಲ್ಲಿ ಹೇಳುತ್ತ ಕೆಲಸ ಏನೂ ಮಾಡದೆ ಇರುವುದಕ್ಕೆ ಕಾರಣವೇನು?

ಶ್ರೀ ವಿ. ಎಲ್. ಪಾಟೀಲ್.—ಪ್ರತಿಯೊಂದು ಜಿಲ್ಲೆಯಲ್ಲಿಯೂ ಮತ್ತು ತಾಲ್ಲೂಕಿನಲ್ಲಿಯೂ ಹಾಸ್ಟಲ್ ಕಟ್ಟಬೇಕೆಂಬ ವಿಚಾರವಿದೆ. ಆ ಪ್ರಕಾರ ಇಲ್ಲಿಯೂ ಕಟ್ಟುವ ವಿಚಾರ ಪರಿಶೀಲನೆ ಮಾಡುತ್ತಿದ್ದೇವೆ. ಅಲ್ಲಿ ನೆಳಿ ಸಿಕ್ಕಿದ ನಂತರ ಹಾಸ್ಟಲ್ ಕಟ್ಟುವುದನ್ನು ವಿಚಾರ ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಪ್ಪ.—ಸರ್ವೆ ನಂಬರ್ 2/7ರಲ್ಲಿ ಎರಡು ಎಕರೆ ಭೂಮಿ ರಿಸರ್ವ್ ಮಾಡಿ ಕೊಡಬೇಕೆಂದು ತೀರ್ಮಾನವಾಗಿದೆ. ಅದಕ್ಕೆ ಸಂಬಂಧಪಟ್ಟ ಸಮಿತಿಯಲ್ಲಿ ನಾನೂ ಒಬ್ಬ ಸದಸ್ಯ. ಹೀಗಿದ್ದರೂ ಕೂಡ ಇನ್ನೂ ಏನೂ ಮಾಡವೆ ಇರುವುದಕ್ಕೆ ಕಾರಣವೇನು ?

ಶ್ರೀ ವಿ. ಎಸ್. ಪಾಟೀಲ್.—ತೀರ್ಮಾನ ಆ ಪ್ರಕಾರ ಆಗಿಲ್ಲ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಮಂತ್ರಿಗಳು ಇಷ್ಟು ವಿದ್ಯಾರ್ಥಿನಿಲಯಗಳು ಇರಬಹುದು ಎಂದು ಉತ್ತರ ಹೇಳಿದರು. ಹಾಸ್ಟಲ್ ಇರುವುದೇ ಸರ್ಕಾರಕ್ಕೆ ಗೊತ್ತಿದೆಯೋ ಇಲ್ಲವೋ. ಅದರ ಯೋಗಕ್ಷೇಮ ಹೇಗಿದೆ ಎನ್ನುವ ಚಿತ್ರ ಕೊಡಲಿ.

ಶ್ರೀ ವಿ. ಎಸ್. ಪಾಟೀಲ್.—ಹಾಸ್ಟಲ್ ಇವೆ. ಎಷ್ಟೆಷ್ಟು ವಿದ್ಯಾರ್ಥಿಗಳು ಇದ್ದಾರೆ ಎನ್ನುವುದು ಗೊತ್ತಿಲ್ಲ.

ಶ್ರೀ ಜಿ. ದುಗ್ಗಪ್ಪ.—ಕೇಂದ್ರ ಸರ್ಕಾರದಿಂದ ಈ ಹಾಸ್ಟೆಲ್ ಕಟ್ಟಡಗಳ ಬಗ್ಗೆ ಸಹಾಯ ದೊರೆಯುತ್ತಿಲ್ಲವೇ ? ಅವರ ನೆರವನ್ನು ಸಂಪೂರ್ಣವಾಗಿ ಉಪಯೋಗ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲವೆ ?

ಶ್ರೀ ವಿ. ಎಸ್. ಪಾಟೀಲ್.—ಹಾಸ್ಟಲ್ ಕಟ್ಟುವ ಸಲುವಾಗಿ, ಈಗಾಗಲೇ 50 ಹಾಸ್ಟಲ್ ಕಟ್ಟುವ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಸ್ಥಳ ಪರಿಶೀಲನೆ ಮಾಡಿಲ್ಲ. ಮಾಡಿದ ನಂತರ, ಸ್ಥಳ ಮತ್ತು ಹಣ ಇದ್ದರೆ ಕಟ್ಟಬಹುದು.

ಶ್ರೀ ಜಿ. ದುಗ್ಗಪ್ಪ.—ಕೇಂದ್ರ ಸರ್ಕಾರದಿಂದ ನೆರವು ದೊರೆಯುತ್ತಾ ಇಲ್ಲವೆ ? ಅದನ್ನು ನಮ್ಮ ಸರ್ಕಾರದವರು ಸಂಪೂರ್ಣವಾಗಿ ಉಪಯೋಗ ಮಾಡಿದ್ದಾರೆಯೇ ಇಲ್ಲವೇ ?

ಶ್ರೀ ವಿ. ಎಸ್. ಪಾಟೀಲ್.—ಮಾಡುತ್ತಾ ಇದ್ದಾರೆ. ಸ್ಥಳ ಪರಿಶೀಲನೆ ಇನ್ನೂ ಮಾಡಿಲ್ಲ. ಸ್ಥಳ ತೆಗೆದುಕೊಂಡಿಲ್ಲ. ಪರಿಶೀಲನೆ ಮಾಡಿದ ನಂತರ ವಿಚಾರ ಮಾಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ತಾಲ್ಲೂಕ್ ಲೆವೆಲ್‌ನಲ್ಲಿ, ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ, ಸ್ಟೇಟ್ ಲೆವಲ್‌ನಲ್ಲಿ ನಿಮ್ಮ ವರ್ಗದವರ ಅನುಕೂಲಕ್ಕಾಗಿ ಕಟ್ಟಡ ಕಟ್ಟುವ ಯೋಜನೆಯನ್ನು ತಯಾರು ಮಾಡಿದ್ದೀರಿ. ಆದರೆ ಬೀರೂರ್ ತಾಲ್ಲೂಕಿನಲ್ಲಿ ವಿದ್ಯಾ ಸೌಕರ್ಯಕ್ಕಾಗಿ ಕಟ್ಟಡ ಇಲ್ಲದೇ ಇರುವಂತೆ ಇನ್ನೂ ಅನೇಕ ತಾಲ್ಲೂಕುಗಳು ಎಷ್ಟೋ ಇವೆ. ಅದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Mr. DEPUTY SPEAKER.—That question does not arise.

Sri KONDAJJI BASAPPA.—What is the financial assistance given by the Central Government ?

ಶ್ರೀ ವಿ. ಎಸ್. ಪಾಟೀಲ್.—ಪ್ರತ್ಯೇಕ ಪ್ರಶ್ನೆ ಹಾಕಿದರೆ ಹೇಳುತ್ತೇನೆ.

ಶ್ರೀ ಎಸ್. ಶ್ರೀಕಂಠಯ್ಯ.—ಪ್ರತ್ಯೇಕತೆ ಹೋಗಬೇಕು, ಜಾತಿ ವಾದ ಹೋಗಬೇಕು ಎಂದು ಹಾಡು ಹಾಡುತ್ತಾ ಇದ್ದೀರಿ. ಸಪರೇಟ್ ಆಗಿ ಡಿಪ್ರೆಸ್ಡ್ ಕ್ಲಾಸ್ ಹಾಸ್ಟಲ್ ಮಾಡುವುದರಿಂದ ಇನ್ನೂ ಪ್ರತ್ಯೇಕತೆ ಜಾಸ್ತಿ ಮಾಡಿದಂತಾಗುವುದಿಲ್ಲವೇ ? ಆದುದರಿಂದ ಜನರಲ್ ಹಾಸ್ಟಲ್ ಕೆಳಗೆ ಏಕೆ ಇದನ್ನು ಕ್ಲಬ್ ಮಾಡಕೂಡದು ?

ಶ್ರೀ ವಿ. ಎಸ್. ಪಾಟೀಲ್.—ಈ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಲ್ಲಪ್ಪನವರು ಕೇಳಿದ್ದಕ್ಕೆ 2 ಎಕರೆ ಕೂಡ ಆರ್ಡರ್ ಆಗಿಲ್ಲ ಎಂದು ಉತ್ತರ ಹೇಳಿದಿರಿ. ಅವರು ನಾನು ಮೆಂಬರ್ ಆಗಿದ್ದೆ ನನಗೆ ಗೊತ್ತು ಆರ್ಡರ್ ಆಗಿದೆ ಎಂದು ಅವರು ಹೇಳಿದರು. ಫೈಲ್ ತರಿಸಿ ಸರಿಯಾಗಿ ಪರಿಶೀಲನೆ ಮಾಡಿ, ಆರ್ಡರ್ ಆಗದೇ ಇದ್ದರೆ ಆರ್ಡರ್ ಆಗುವ ಹಾಗೆ ಮಾಡಿ, ನಿಮ್ಮವರ್ಗದವರ ಹಾಸ್ಟಲ್ ಕಟ್ಟುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ವಿ. ಎಸ್. ಪಾಟೀಲ್.—ಇನ್ನೂ ಆರ್ಡರ್ ಆಗಿಲ್ಲ. ಫೈಲ್ ತರಿಸಿ ನೋಡಬಹುದು.

Sri B. P. GANGADHAR.—Just now you were pleased to submit that there is a proposal for starting a hostel in district headquarters as well as taluk headquarters. May I know whether the Government has prepared any Scheme with respect to that ? May I also know by what time the same will be completed ?

ಶ್ರೀ ವಿ. ಎರ್. ಪಾಟೀಲ್.—ಈಗಾಗಲೇ ಹೇಳಿದ್ದೇನೆ. 50 ಹಾಸ್ಟಲುಗಳನ್ನು ಕಟ್ಟುವ ವಿಚಾರ ಪರಿಶೀಲನೆ ಮಾಡಿದ್ದೇವೆ. ಈಗಾಗಲೇ ಕೆಲವು ಕಟ್ಟಡಗಳನ್ನು ಕಟ್ಟಿದ್ದೇವೆ. ಸ್ಥಳ ಪರಿಶೀಲನೆ ಮಾಡಿ ಎಲ್ಲೆಲ್ಲ ಸಾಧ್ಯವೋ ಅಲ್ಲಿ ಕಟ್ಟುತ್ತೇವೆ.

Sri B. P. GANGADHAR.—What is the time limit ?

ಶ್ರೀ ವಿ. ಎರ್. ಪಾಟೀರ್.—ಸ್ಥಳ ತೊಂದರೆ ಇರುತ್ತದೆ. ಸ್ಥಳ ಸಿಕ್ಕಿದ ನಂತರ ಅದು ಆಗ ಬೇಕಾದು. ಟೈಂ ಲಿಮಿಟ್ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಂ. ತಮ್ಮಯ್ಯ.—ಸ್ವಾಮಿ, ತಾಲ್ಲೂಕು ಹೆಡ್ ಕ್ವಾರ್ಟರ್ಸ್ ಆದ ಕಡೂರ್‌ನಲ್ಲಿ ಬಾಡಿಗೆ ಮನೆಯಲ್ಲಿ ನಡೆಸುತ್ತಾ ಇದ್ದಾರೆ ಅಲ್ಲಿ ಕಟ್ಟಿಸದೇ ಬೀರೂರಿನಲ್ಲಿ ಕಟ್ಟುತ್ತೇವೆ ಎಂದರೆ ಏನು ?

ಶ್ರೀ ವಿ. ಎರ್. ಪಾಟೀರ್.—ಬೀರೂರಿನಲ್ಲಿ ಕಟ್ಟುತ್ತೇವೆ ಎಂದು ಹೇಳಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಮೈಸೂರು ಸರ್ಕಾರದವರು ತಾಲ್ಲೂಕಿಗೆ ಒಂದಾದರೂ ಹಿಂದುಳಿದವರ ಹಾಸ್ಟರ್‌ನ್ನು ಕಟ್ಟಬೇಕು ಎಂದು ನಿರ್ಧಾರ ಮಾಡಿದ್ದೀರಾ ?

ಶ್ರೀ ವಿ. ಎರ್. ಪಾಟೀರ್.—ತಾಲ್ಲೂಕ್ ಬೋರ್ಡ್ ಡಿಸ್ಟ್ರಿಕ್ಟ್ ಬೋರ್ಡ್ ಕಟ್ಟಬೇಕು ಎನ್ನುವ ವಿಚಾರ ಮಾಡಿದೆ. ಅದರಂತೆ ವಿಚಾರ ಮಾಡುತ್ತಾ ಇದ್ದೇವೆ.

ಶ್ರೀ ಎಸ್. ಎಸ್. ಅರಕೇರಿ.—ಒಂದೊಂದು ತಾಲ್ಲೂಕಿನಲ್ಲಿ 120 ಹಳ್ಳಿಗಳು ಇವೆ. ಡಿಸ್ಟ್ರಿಕ್ಟ್‌ಗೆ ಒಂದೊಂದು ಇದ್ದರೆ ಹೇಗೆ ?

ಶ್ರೀ ವಿ. ಎರ್. ಪಾಟೀರ್.—ಎರ್ನಾ ಕಡೆಗೂ ಕೊಡಬೇಕು ಎನ್ನುವ ವಿಚಾರ ಇದೆ.

ಶ್ರೀ ಕೊಂಡಜ್ಜಿ ಬಸಪ್ಪ.—ಮೈಸೂರು ಸಂಸ್ಥಾನದಲ್ಲಿ ನಿಮ್ನವರ್ಗದವರ ವಿದ್ಯಾರ್ಥಿನಿಲಯವನ್ನು ನಿರ್ಮಿಸುವುದಕ್ಕೆ ಬಜೆಟ್‌ನಲ್ಲಿ ಎಷ್ಟು ಹಣ ಒದಗಿಸಿದ್ದೀರಾ ಎಂಬುದನ್ನು ಹೇಳುತ್ತೀರಾ ?

ಶ್ರೀ ವಿ. ಎರ್. ಪಾಟೀರ್.—ಬೇರೆ ಪ್ರಶ್ನೆ ಹಾಕಿದರೆ ಹೇಳಬಹುದು.

Sale of Lottery Tickets

13. Sri S. M. GUREDDI (Muddebihal).—

Will the Minister for Finance, Planning and Youth Affairs be pleased to state :—

(*a*) whether they have thought of collecting money for developmental works through sale of lottery tickets ;

(*b*) if so, at what stage it is ?

A.—Sri RAMAKRISHNA HEGDE (Minister for Finance, Planning and Youth Affairs).—

(*a*) Yes.

(*b*) Scheme is being prepared by getting the connected information.

ಶ್ರೀ ಎಸ್. ಎಂ. ಗುರೆಡ್ಡಿ.—ರಾಫರಿ ಟಿಕೇಟುಗಳನ್ನು ಮಾರುವ ಮೂಲಕ ರಾಜ್ಯ ಸರ್ಕಾರಕ್ಕೆ ಎಷ್ಟು ಹಣ ದೊರಕಬಹುದು ಎಂದು ಹೇಳುವುದಕ್ಕೆ ಆಗುತ್ತದೆಯೇ ?

† ಶ್ರೀ ರಾಮಕೃಷ್ಣ ಹೆಗಡೆ.—ಈಗಲೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗಾಗಲೇ ಬೇರೆ ರಾಜ್ಯದವರು ತಮ್ಮ ರಾಜ್ಯದಲ್ಲಿ ರಾಫರಿ ಟಿಕೇಟ್ ಮಾರುವುದರಿಂದ ಎಷ್ಟು ಹಣ ಸರ್ಕಾರಕ್ಕೆ ಬರುತ್ತದೆ ಎಂಬುದನ್ನು ತಿಳಿಸಿದ್ದಾರೆ. ಪಂಜಾಬ್ ಸರ್ಕಾರದವರು ಈ ಮೂಲಕ ತಮ್ಮ ಸರ್ಕಾರಕ್ಕೆ ಎಷ್ಟು ಹಣ ಬರುತ್ತದೆಂಬುದನ್ನು ಇವತ್ತಿನ ಪೇಪರ್‌ನಲ್ಲಿ ತಿಳಿಸಿದ್ದಾರೆ. ಅದೇ ರೀತಿ ನಮ್ಮ ಸರ್ಕಾರದವರು ಸಹ ಈ ರಾಫರಿ